ಶ್ರೀ ರಮಾನಾಥ ರೈ.—ಮಾನ್ಯ ಅಧ್ಯಕ್ಷರೇ, ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವಿಶೇಷವಾಗಿ ವೇಣೂರು ತಾಲ್ಲೂಕಿನ ಕೆಲವು ಭಾಗದಲ್ಲಿ ಕುಂದಾಪುರ ತಾಲ್ಲೂಕಿನ ಕೆಲವು ಭಾಗದಲ್ಲಿ ಸಮಾಜದಲ್ಲಿ ಬಹಳಷ್ಟು ಶೋಷಿತರಾಗಿ ಮೈಗೆ ಬಟ್ಟೆ ಹಾಕಲಿಕ್ಕೂ ಅಸಾಧ್ಯವಾಗಿರತಕ್ಕಂತಹ ಕುಡುಬಿ ಜನಾಂಗವಿದೆ ಬಹಳಷ್ಟು ವರ್ಷಗಳಿಂದ ಅವರನ್ನು ಪರಿಶಿಷ್ಟ ವರ್ಗದವರ ಪಟ್ಟಿಗೆ ಸೇರಿಸಬೇಕೆಂದು ಬಹಳಷ್ಟು ಬೇಡಿಕೆಯನ್ನು ಇಟ್ಟರೂ ಸಹ ಅದು ಇವತ್ತಿನವರೆಗೂ ಕಾರ್ಯರೂಪಕ್ಕೆ ಬಂದಿಲ್ಲ. ನಮಗೆ ಕೊಟ್ಟಿರತಕ್ಕ ಉತ್ತರದಲ್ಲಿಯೂ ಸಹ ಯಾವುದೇ ಜಾತಿಯನ್ನು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಪಟ್ಟಿಯಲ್ಲಿ ಸೇರಿಸುವ ಅಧಿಕಾರ ಕೇಂದ್ರ ಸರ್ಕಾರದ ವ್ಯಾಪ್ತಿಗೆ ಬರುತ್ತದೆಂದು ಹೇಳುತ್ತಿದ್ದಾರೆ. ರಾಜ್ಯ ಸರ್ಕಾರ ಆ ಬಗ್ಗೆ ಶಿಫಾರಸ್ಸು ಮಾಡಿ ಕೇಂದ್ರ ಸರ್ಕಾರದ ಮೇಲೆ ಒತ್ತಡ ತರಬೇಕೆನ್ನುವ ಉದ್ದೇಶದಿಂದ ನಾನು ಈ ಪ್ರಶ್ನೆಯನ್ನು ಕೇಳಿದ್ದೇನೆ. ನಮ್ಮ ಸಮಾಜ ಕಲ್ಯಾಣ ಇಲಾಖೆ ಅಥವಾ ಸರ್ಕಾರ ಈವೊಂದು ಜನಾಂಗದ ಅಭಿವೃದ್ಧಿಯ ದೃಷ್ಟಿಯಿಂದ ಅವರನ್ನು ಪರಿಶಿಷ್ಟ ಜಾತಿಯ ಪಟ್ಟಿಯಲ್ಲಿ ಸೇರಿಸಲಿಕ್ಕೆ ಪ್ರಯತ್ನ ಮಾಡಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಬಿ. ಶಿವಣ್ಣ.—ಮಾನ್ಯ ಅಧ್ಯಕ್ಷರೆ, ಕುಡುಬಿ ಜನಾಂಗದವರು ಬ್ಯಾಕ್‌ವರ್ಡ್‌ಕ್ಲಾಸ್‌ನ 'ಬಿ' ಗ್ರೂಪಿನಲ್ಲಿದ್ದಾರೆ. ಅವರನ್ನು ಪರಿಶಿಷ್ಟ ಜನಾಂಗಕ್ಕೆ ಸೇರಿಸಬೇಕಾದರೆ ಅದು ಕೇಂದ್ರ ಸರ್ಕಾರದ ವ್ಯಾಪ್ತಿಗೆ ಬರುತ್ತದೆ ಅದೂ ಅಲ್ಲದೆ ಕರ್ನಾಟಕ ಸರ್ಕಾರಕ್ಕೆ ಮನವಿಗಳು ಬಂದಿವೆ. ಸಮಾಜ ಕಲ್ಯಾಣ ಇಲಾಖೆಯಲ್ಲಿ ಒಂದು ಸಮಿತಿ ಇದೆ, ಆ ಸಮಿತಿ ಶಿಫಾರಸು ಮಾಡುತ್ತದೆ.

ಅಧ್ಯಕ್ಷರು.—ಶ್ರೀ ಎ. ಕೃಷ್ಣಪ್ಪ, ಸದಸ್ಯರು ಗೈರುಹಾಜರಿದ್ದಾರೆ ಶ್ರೀ ಎಲ್. ಆರ್. ಶಿವರಾಮೇಗೌಡ.

ಶ್ರೀ ಎಸ್. ಎಂ. ಯಾಹ್ಯ.—ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಾದ ಶಿವರಾಮೇಗೌಡರ ಪ್ರಶ್ನೆಯ ಬಗ್ಗೆ ನಾನೊಂದು ಪತ್ರವನ್ನು ತಮಗೆ ಬರೆದಿದ್ದೇನೆ. ಅದು ಮೊದಲು ಅನ್‌ಸ್ಟಾರ್ಡ್ ಕೊಶ್ಚನ್ ಆಗಿ ಆಮೇಲೆ ಸ್ಟಾರ್ಡ್ ಕೊಶ್ಚನ್ ಆಗಿದೆ. ಆದ್ದರಿಂದ ಇದನ್ನು ಆಮೇಲೆ ತೆಗೆದುಕೊಳ್ಳಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ,

MR. SPEAKER.—The Hon'ble Minister has asked some time to reply. We will take it up on some other day.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು.

ಶ್ರೀ ಎಂ. ವೀರಪ್ಪಮೊಯಿಲಿ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಮಂತ್ರಿಗಳು) — ಮಾನ್ಯ ಅಧ್ಯಕ್ಷರೆ, ದಿನಾಂಕ ೧೫ ೬-೧೯೮೦ ರಂದು ಲಿಖಿತ ಮೂಲಕ ಉತ್ತರ ಕೊಡಬೇಕಾದ ೧೦ನೇ ಪಟ್ಟಿಯಲ್ಲಿರುವ ಒಟ್ಟು ೩೭ ಪ್ರಶ್ನೆಗಳ ಪೈಕಿ ಒಂಭತ್ತು ಪ್ರಶ್ನೆಗಳನ್ನು ಹೊರತುಪಡಿಸಿ ಇನ್ನುಳಿದ ೨೮ ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಉತ್ತರಗಳನ್ನು ಸಭೆಯ ಮುಂದಿಡುತ್ತೇನೆ.

ವಿದ್ಯುತ್ ಯೋಜನೆಗಳಿಗೆ ಕೇಂದ್ರ ಸರ್ಕಾರದ ಅನುಮತಿ ಪಡೆಯುವ ಬಗ್ಗೆ.

೧೫೮. ಶ್ರೀ ಪಿ. ಜಿ. ಆರ್. ಸಿಂಧ್ಯಾ (ಕನಕಪುರ).—ಮಾನ್ಯ ಕೈಗಾರಿಕಾ ಇಂಧನ ಮತ್ತು ವಕ್ಫ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯ ಸರ್ಕಾರದಿಂದ ಕೇಂದ್ರ ಸರ್ಕಾರಕ್ಕೆ ವಿದ್ಯುತ್ ತಯಾರಿಸುವ ಎಷ್ಟು ಯೋಜನೆಗಳನ್ನು ಶಿಫಾರಸ್ಸು ಮಾಡಲಾಗಿದೆ (ವಿವರಗಳನ್ನು ತಿಳಿಸುವುದು)?

ಆ) ಈ ಯೋಜನೆಗಳಿಗೆ ಕೇಂದ್ರ ಸರ್ಕಾರದ ಒಪ್ಪಿಗೆ ಪಡೆಯಲು ಕೈಗೊಂಡ ಕ್ರಮಗಳೇನು ?

ಶ್ರೀ ಎಸ್. ಎಂ. ಯಾಹ್ಯ (ಕೈಗಾರಿಕೆ, ಇಂಧನ ಮತ್ತು ವಕ್ಫ್ ಸಚಿವರು).—

ಅ) ಈ ಕೆಳಕಾಣಿಸಿದ ಯೋಜನೆಗಳನ್ನು ಕೇಂದ್ರ ವಿದ್ಯುತ್ ಪ್ರಾಧಿಕಾರಕ್ಕೆ ಅನುಮತಿಗಾಗಿ ಕಳುಹಿಸಲಾಗಿದೆ.

ಆ) ಜಲ ವಿದ್ಯುತ್ ಯೋಜನೆಗಳು:

೧) ಶಿವಸಮುದ್ರಂ ಕಾಲಿಕ ವಿದ್ಯುತ್ ಯೋಜನೆ, ಸ್ಥಾಪಿತ ಘಟಕ ಸಾಮರ್ಥ್ಯ ೨ × ೧೩೫: ೨೭೦ ಮೆಗಾವಾಟ್ ವಾರ್ಷಿಕ ವಿದ್ಯುತ್ ಉತ್ಪಾದನೆ ೧೫೯೦ ಮಿ ಯು.